ಕಥೆ





ವಿನಯಾ ಒಕ್ಕುಂದ

ಕಲೆ: ಆಶಾರಾಣಿ ನಡೋಣಿ

# ಚಿಕನ ಬಿರ್ಯಾನಿ

'ರೊಟ್ಟಿಯಾಕಿ ಬರಬೋದು, ನಾ ಸ್ನಾನಕ ಹೊಂಟೀನಿ, ಹಾಂ ಸಣ್ಣಾಕಿ ಅದಾಳಾಕಿ, ನೀವು ಖಬರನ್ಾಗ ಇರ್ರಿ. ನಾಳೆಯಿಂದ ರೊಟ್ಟಿ ಇಲ್ಲದ್ಹಾಂಗ ಮಾಡಿಡಬ್ಯಾಡ್ರಿ'. ಅವಳ ತಣ್ಣನೆಯ ಹರಿತ ದನಿ ಅವನಿಗೆ ಸಮವೇ ತಾಕಿತು. ಆದರೇನು? ಅವನೇನು ಕಮ್ಮಿ ಢೋಕಾರನೇ? 'ಹೂಂಂ' ಅಂತ ಒಂದ್ ನಮೂನಿ ದೀರ್ಘ ಉಸಿರ್ಹಾಕಿದ. ಆ ಉಸಿರ ನಾದದಲ್ಲಿ ಏನೆಲ್ಲ ಇತ್ತು. ಈ ತಾಟಕಿಯಂಥ ರಕ್ಕಸಿಯನ್ನು ಲಗ್ನಾ ಮಾಡಿಕೊಂಡು ಏನೇನು ಪಡಿಪಾಟಲು ಪಟ್ಟೆ. 365X35 ವರ್ಷಗಳ ಉದ್ದಾನುದ್ದದ ಹಗಲು ರಾತ್ರಿಗಳಲ್ಲಿ ಉರುಪಳಿಸಿ ಹೋದ ಯಾತನೆಗೇ ಉಸಿರು ಕೊಡುವಂತೆ ಇತ್ತು. ಅಕಸ್ಮಾತ್ ಯಾರಾದರು ಆ ದೃಶ್ಯಕ್ಕೆ ಸಾಕ್ಷಿಯಾಗಿದ್ದರೆ, ಖಂಡಿತವಾಗಿಯೂ ಅವನಿಗೆ ನೂರಕ್ಕೆ ನೂರು ಫಿದಾ ಆಗಿ, ಅವಳಿಗೇ ಒಂದು ಕಂತೆ ಬುದ್ಧಿವಾದ